ಅಯೋಗದವರಿಗೆ ಪತ್ರವನ್ನು ಬರೆದಿದ್ದೇವೆ. ಈ ತಿಂಗಳ ಕೊನೆಯಲ್ಲಿ ಲಿಸ್ಟ್‌ನ್ನು ಕಳುಹಿಸಿಕೊಡುತ್ತೇವೆಂದು ಅವರು ಹೇಳಿದ್ದಾರೆ. ಚರಿತ್ರೆ ಮತ್ತು ಇನ್ನೊಂದು ವಿಷಯಕ್ಕೆ ಈಗಾಗಲೇ ಇಬ್ಬರು ಉಪಾಧ್ಯಾಯರನ್ನು ನೇಮಕ ಮಾಡಲಾಗಿದೆ. ಇಂಗ್ಲಿಷ್ ಉಪನ್ಯಾಸಕರ ಮತ್ತು ದೈಹಿಕ ಶಿಕ್ಷಕರ ಹುದ್ದೆಗಳಿಗೆ ಈಗ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಡಾ॥ ಸಂಗಮೇಶ್ವರ ಸರದಾರ್ --ಹಾಗಾದರೆ ಯಾವ ಯಾವ ವಿಷಯಗಳನ್ನು ಭೋಧಿಸಲು ಉಪಾಧ್ಯಾಯರುಗಳು ಇಲ್ಲ. ಆ ವಿಷಯಗಳಲ್ಲಿ ವಿದ್ಯಾರ್ಥಿಗಳು ಫೇಲ್ ಆದರೆ ಅವರಿಗೆ ಪರೀಕ್ಷೆಯಲ್ಲಿ ಗ್ರೇಸ್ ಮಾರ್ಕ್ಸ್‌ನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ, ರಾಚಯ್ಯ --ಇದು ತಜ್ರಿಗೆ ಸಂಬಂಧಪಟ್ಟ ವಿಚಾರ

ಶ್ರೀ ಬಿ. ಎಸ್ ಯಡಿಯೂರಪ್ಪ:--ತಾವು ಈ ರೀತಿ ಹೇಳುವುದಾದರೆ ನಮ್ಮ ಶಾಲೆಗಳಿಗೆ ಇನ್ನು ಮುಂದೆ ಉಪಾಧ್ಯಾಯರೇ ಬೇಡ ಎಂದು ಹುಡುಗರು ಚಳುವಳಿ ಪ್ರಾರಂಭ ಮಾಡುತ್ತಾರೆ.

ಅಧ್ಯಕ್ಷರು.--ಈ ಪ್ರಶ್ನೆ 267 (848) ಪ್ರಶ್ನೆ. 298 (892)ಪ್ರಶ್ನೆಗಳನ್ನು ಮುಂದಕ್ಕೆ ಹಾಕಿದ್ದೇನೆ

ಶ್ರೀ ಪಿ. ಎಲ್ ಪಾಟೀಲ್ (ನೂನ್ಯ ಕರದಾಯ ಮಂತ್ರಿಗಳು):--ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನನಗೆ ಸಂಬಂಧ ಪಟ್ಟದಲ್ಲ ಇದು ಮಾನ್ಯ ಪಶು ಸಂಗೋಪನಾ ಖಾತೆ ಸಚಿವರಿಗೆ ಸಂಬಂಧಪಟ್ಟಿದ್ದು.

ಅಮೃತ ಮಹಲ್ ಕಾವಲಿಗೆ ಗೊತ್ತು ಪಡಿಸಿರುವ ಜಮೀನು

286 (828) ಶ್ರೀ ಪಿ. ತಿಪ್ಪಯ್ಯ (ಮುಡಿಗೆರೆ) ಮಾನ್ಯ ಪಶು ಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:--

ಅ) ಅಮೃತ ಮಹಲ್ ಕಾವಲಿಗೆ ಮೀಸಲಿಟ್ಟ ಜಮೀನಿನ ಪೈಕಿ ಕೆಲವು ಕಾವಲುಗಾರರಿಗೆ ಹುರುಳಿ ಬೆಳೆಯಲು ಕೊಟ್ಟಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಈ ನೀತಿಯನ್ನು ಬದಲಾಯಿಸಲು ಸರಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು ಪಶು ಸಂಗೋಪನಾ ಮಂತ್ರಿಗಳ ಪರವಾಗಿ).--ಅ) ಅಮೃತ ಮಹಲ್ ಕಾವಲಿನ ಜಮೀನನ್ನು ಕಾವಲುಗಾರರಿಗೆ ಹುರುಳಿ ಬೆಳೆಯಲು ಕೊಟ್ಟಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ತಿಪ್ಪಯ್ಯ.--ಅಮೃತ ಮಹಲ್ ಕಾವಲುಗಾರರಿಗೆ ಹುರುಳಿ ಬೆಳೆಯುವುದಕ್ಕಾಗಿ 50 ಎಕರೆಯನ್ನು ಕೊಡುತ್ತಿದ್ದರು ಆದರಲ್ಲಿ ಅವರು ಹುರುಳಿಯನ್ನು ಬೆಳೆಯುತ್ತಿದ್ದುದನ್ನು ನಾವು ನೋಡಿದ್ದೇವೆ. ಈಗಲೂ ನೋಡುತ್ತಿದ್ದೀರಾ ?

ಶ್ರೀ ಎಂ. ಪಿ ಪ್ರಕಾಶ್ --ಹಿಂದೆ ಹುರುಳಿಯನ್ನು ಬೆಳೆಯುವುದಕ್ಕೆ ಕೊಡುತ್ತಿದ್ದರು. ಅವರು ಕೊಡುತ್ತಿದ್ದುದು 40 ಸೇರು ಮಾತ್ರ. ಆ ಹುರುಳಿಯನ್ನು ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತಿತ್ತು. 1956ರಲ್ಲಿ ಇದನ್ನು ತೆಗೆದುಹಾಕಿದ್ದಾರೆ ಈಗ ಅವರಿಗೆ 5-5 ಎಕರೆ ಕೊಡುತ್ತಿದ್ದಾರೆ.

ಶ್ರೀ ಪಿ ತಿಪ್ಪಯ್ಯ.--50 ಎಕರೆ ಕೂಡ ಸಾಗು ಮಾಡುತ್ತಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿಡೆಯೇ ?

ಶ್ರೀ ಎಂ. ಪಿ ಪ್ರಕಾಶ್.--ಆ ರೀತಿ ಅತಿಕ್ರಮಣವಾಗಿ ಸಾಗುವಳಿಯನ್ನು ಮಾಡುತ್ತಿದ್ದರೆ ಅವರನ್ನು ಹಿಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶಿಕಾರಿಪುರದ ಕಿರಿಯ ಕಾಲೇಜಿನಲ್ಲಿ ಕೊಠಡಿಗಳ ಕೊರತೆ

287 (776) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).--ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :--

ಅ) ಶಿಕಾರಿಪುರ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇದ್ದು ಕೊಠಡಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಕಟಕಿ ಬಾಗಿಲುಗಳಲ್ಲದ ಹಾಗೂ ಚಾವಣಿ ಬೀಳುವ ಸ್ಥಿತಿಯಲ್ಲಿರುವ ಕೊಠಡಿಗಳಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದ್ದೆಯೇ :